ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ

ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ,

ಬೆಂಗಳೂರು-560001, ದಿ: 11-08-2020.

-: ಸುತ್ತೋಲೆ :-

ವಿಷಯ:- ಸರ್ಕಾರಿ ಪಾಲಿಟೆಕ್ನಿಕ್, ಹರಪನಹಳ್ಳಿ ಇಲ್ಲಿ ಎಐಸಿಟಿಇ ಟ್ರೈನಿಂಗ್ ಅಂಡ್ ಲರ್ನಿಂಗ್ ಅಕಾಡೆಮಿ, ನವದೆಹಲಿ(ATAL) ಇವರ ಸಹಯೋಗದೊಂದಿಗೆ ಹಮ್ಮಿಕೊಂಡಿರುವ ಆನ್-ಲೈನ್ ಅಲ್ಪಾವಧಿ ತರಬೇತಿ ಕಾರ್ಯಕ್ರಮಕ್ಕೆ ಅನುಮತಿ ನೀಡುವ ಬಗ್ಗೆ.

ಉಲ್ಲೇಖ:- ತಮ್ಮ ಕಛೇರಿ ಪತ್ರ ಸಂಖ್ಯೆ: ಸಪಾಹ/01/ಸಿಸಿಟೆಕ್/2020-21/81, ದಿನಾಂಕ:10-08-2020

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದನ್ವಯ ಎಐಸಿಟಿಇ ಟ್ರೈನಿಂಗ್ ಅಂಡ್ ಲರ್ನಿಂಗ್ ಅಕಾಡೆಮಿ, ನವದೆಹಲಿ (ATAL) ಇವರ ಸಹಯೋಗದೊಂದಿಗೆ ದಿನಾಂಕ:24-08-2020 ರಿಂದ ದಿನಾಂಕ:28-07-2020 ರವರೆಗೆ " ROBOTICS " ಎಂಬ ವಿಷಯದಲ್ಲಿ ಸರ್ಕಾರಿ ಪಾಲಿಟೆಕ್ನಿಕ್, ಹರಪನಹಳ್ಳಿ ಇಲ್ಲಿ ರಾಜ್ಯದ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಆನ್-ಲೈನ್ ಅಲ್ಪಾವಧಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಉದ್ದೇಶಿಸಿದ್ದು, ಸದರಿ ಆನ್-ಲೈನ್ ಅಲ್ಪಾವಧಿ ತರಬೇತಿ ಕಾರ್ಯಕ್ರಮವನ್ನು ಸಂಸ್ಥೆಯಲ್ಲಿ ಆಯೋಜಿಸಲು ಅನುಮತಿ ನೀಡಲಾಗಿದೆ.

ಸದರಿ ಆನ್-ಲೈನ್ ಅಲ್ಪಾವಧಿ ತರಬೇತಿ ಪಡೆದುಕೊಳ್ಳಲು ಇಚ್ಚಿಸುವ ಬೋಧಕ ಸಿಬ್ಬಂದಿ ವರ್ಗದವರು, ಎಐಸಿಟಿಇ ವೆಬ್-ಸೈಟ್ www.aicte-india.org/atal ಅಥವಾ www.atalacademy.aicte-india.org/signup ನಲ್ಲಿ ನೊಂದಾಯಿಸಿಕೊಳ್ಳಲು ಸೂಚಿಸಲಾಗಿದೆ. ಸದರಿ ತರಬೇತಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ತರಬೇತಿಯ ಸಂಯೋಜನಾಧಿಕಾರಿಯಾದ ಶ್ರೀ ದ್ರುವಕುಮಾರ ಕೆ, ಉಪನ್ಯಾಸಕರು, ವಿಜ್ಞಾನ ವಿಭಾಗ, ಸರ್ಕಾರಿ ಪಾಲಿಟೆಕ್ನಿಕ್, ಹರಪನಹಳ್ಳಿ ಇವರನ್ನು ಮೊಬೈಲ್ ಸಂಖ್ಯೆ: 9844197172 ಅಥವಾ ಈ-ಮೇಲ್ ಐಡಿ polestarputta@gmail.com ಮೂಲಕ ಸಂಪರ್ಕಿಸಲು ಸೂಚಿಸಲಾಗಿದೆ.

ಆನ್-ಲೈನ್ ತರಬೇತಿಯನ್ನು ಆಯೋಜಿಸಿರುವ ಸಂಸ್ಥೆಯ ಪ್ರಾಚಾರ್ಯರು, ಸದರಿ ತರಬೇತಿಗೆ ಆಯ್ಕೆಗೊಂಡ ಸರ್ಕಾರಿ/ಅನುದಾನಿತ ಸಂಸ್ಥೆಗಳ ಬೋಧಕ ಸಿಬ್ಬಂದಿ ವರ್ಗದವರ ಪಟ್ಟಿಗೆ ದಿನಾಂಕ:19-08-2020 ರೊಳಗಾಗಿ ಇಲಾಖೆಯಿಂದ ಅನುಮೋದನೆ ಪಡೆದು ಆನ್-ಲೈನ್ ತರಬೇತಿ ನಡೆಸಲು ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು (ಸಿಡಿಸಿ).

ಇವರಿಗೆ:- ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್, ಹರಪನಹಳ್ಳಿ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

ಪ್ರತಿ:- 1) ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್/ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

2) ಇಲಾಖೆಯ ಇ-ಆಡಳಿತ ವಿಭಾಗಕ್ಕೆ ವೆಬ್ -ಸೈಟ್ ನಲ್ಲಿ ಪ್ರಕಟಿಸಲು.